C.C– 227/2018

ಡಿ. ಡಬ್ಲೂ – 1

ಸಾಕ್ಷಿಯನ್ನು ದಿಃ 10.06.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಫಿರ್ಯಾದಿ ಪರ ವಕೀಲರಾದ ಶ್ರೀ. ಸಿ.ಎಸ್ ರವರಿಂದಃ**

**1.** ನಾನು 4 ನೇ ತರಗತಿಯವರೆಗೆ ಓದಿದ್ದೇನೆ. ನನಗೆ ವ್ಯವಹಾರಿಕ ಜ್ಞಾನ ಇದೆ. ಆದರೆ ಅಕ್ಷರ ಜ್ಞಾನ ಇಲ್ಲ. ನಾನು ವಿಗ್ರಹಗಳನ್ನು ಮಾಡುತ್ತಿರುವ ಬಗ್ಗೆ ಪರವಾನಗಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. 5,60,000/– ರೂ.ಗಳಿಗೆ 2015 ರಲ್ಲಿ ಫಿರ್ಯಾದಿಯು ಅಂದಾಜು ಬಿಲ್ಲನ್ನು ಮಾಡಿಕೊಡುವಂತೆ ಕೇಳಿದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಸದರಿ 5,60,000/– ರೂ.ಗಳ ಅಂದಾಜು ಬಿಲ್ಲಿನ ವಿಚಾರವನ್ನು ನನ್ನ ಉತ್ತರ ನೋಟೀಸಿನಲ್ಲಿ ಬರೆಸಿಲ್ಲ ಎಂದರೆ ಸರಿ. ಫಿರ್ಯಾದಿಯು ವಿಗ್ರಹಗಳ ಮಾರಾಟಗಾರನಲ್ಲ ಎಂದರೆ ಸರಿಯಲ್ಲ. ಅವರು ಎಲ್ಲಿ ವಿಗ್ರಹಗಳನ್ನು ಮಾರಾಟ ಮಾಡುತ್ತಾರೆ ಎಂದು ಹಾಗೂ ಈ ಬಗ್ಗೆ ಪರವಾನಗಿ ಇದೆಯೇ ಎಂಬುದನ್ನು ನಾನು ವಿಚಾರ ಮಾಡಿಲ್ಲ. ಶ್ರೀಲಕ್ಷ್ಮಿ ಹ್ಯಾಂಡ್ ಕ್ರಾಫ್ಟ್ ಎನ್ನುವ ನಾನು ನಡೆಸುತ್ತಿರುವ ಸಂಸ್ಥೆಗೆ ಜಿ ಎಸ್ ಟಿಯನ್ನು ಪಡೆದಿದ್ದೇನೆ. 5,60,000/– ರೂ. ಬೆಲೆ ಬಾಳುವ ವಿಗ್ರಹಗಳಿಗೆ ಸಂಬಂಧಪಟ್ಟಂತೆ ನಾನು ಫಿರ್ಯಾದಿಗೆ ಹಾಕಿಕೊಟ್ಟ ಅಂದಾಜು ಬೆಲೆಯಲ್ಲಿ ಯಾವ ಯಾವ ವಿಗ್ರಹಕ್ಕೆ ಎಷ್ಟು ಹಣ ಎಂಬುದನ್ನು ಬರೆದುಕೊಟ್ಟಿದ್ದೇನೆ. ಅದನ್ನು ನಿಡಿ–5 ರಂತೆ ಹಾಜರು ಪಡಿಸಿದ್ದೇನೆ. ಶಿವಕುಮಾರ್ ರವರ ಮೂಲಕ ಫಿರ್ಯಾದಿಗೆ 2 ಲಕ್ಷ ರೂ. ಬೆಲೆ ಬಾಳುವ ವಿಗ್ರಹಗಳನ್ನು ನೀಡಿದ ಕುರಿತು ನಿಡಿ–5 ರಂತೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಸದರಿ ವಿಗ್ರಹಗಳನ್ನು ಒಮ್ಮೆಗೆ ನಾನು ಕೊಟ್ಟಿಲ್ಲ. ಆದರೆ ಆಗಾಗ ಕೊಟ್ಟ ವಿಗ್ರಹಗಳ ಬೆಲೆ 2 ಲಕ್ಷ ರೂ.ಗಳಾಗಿರುತ್ತದೆ. ಫಿರ್ಯಾದಿಯು 4,90,000/– ರೂ.ಗಳನ್ನು ನನಗೆ ಚೆಕ್ ಮೂಲಕ ಕೊಟ್ಟಿದ್ದು, ಬಾಕಿ ಉಳಿಸಿಕೊಂಡ 60–70 ಸಾವಿರ ರೂ.ಗಳ ವಸೂಲಾತಿಗಾಗಿ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

**2.** 2015 ರ ಜುಲೈ ತಿಂಗಳಲ್ಲಿ 4,90,000/– ರೂ.ಗಳನ್ನು ಫಿರ್ಯಾದಿಯು ನನಗೆ ಚೆಕ್ಕಿನ ಮೂಲಕ ನೀಡಿದರು. ಯಾವುದೇ ಒಂದು ವಿಗ್ರಹವನ್ನು ಮಾರಾಟ ಮಾಡುವ ಮೊದಲು ಅದರ ಅಂದಾಜು ಮೌಲ್ಯ ಹಾಗೂ ನೈಜ ಮೌಲ್ಯದ ಕುರಿತು ಪ್ರತ್ಯೇಕ ಬಿಲ್ಲುಗಳನ್ನು ತೆಗೆಯುತ್ತೇವೆ ಎಂದರೆ ಸರಿ. ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. ವಿಗ್ರಹದ ಖರೀದಿಯ ಮೊದಲು ಕೊಟ್ಟ ಮುಂಗಡ ಹಣ ಮತ್ತು ಬಾಕಿ ಹಣಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ನಾನು ನ್ಯಾಯಾಲಯದ

ಮುಂದೆ ಹಾಜರು ಪಡಿಸಿಲ್ಲ. ಸಾಮಾನ್ಯವಾಗಿ ಯಾರಾದರು ಮುಂಗಡ ಹಣವನ್ನು ಕೊಟ್ಟಾಗ ಸದರಿ ಮುಂಗಡ ಹಣದ ಭದ್ರತೆಗಾಗಿ ಚೆಕ್ ಅನ್ನು ತೆಗೆದುಕೊಳ್ಳುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದಾದರು ಒಂದು ವಸ್ತುವನ್ನು ಖರೀದಿಸಲು ಆರ್ಡರ್ ಅನ್ನು ಮಾಡಿದ್ದು, ನಂತರ ಯಾವುದೇ ಕಾರಣಕ್ಕಾಗಿ ಸದರಿ ಆರ್ಡರ್ ಅನ್ನು ರದ್ದುಗೊಳಿಸಿದ ನಂತರ ಮುಂಗಡ ಹಣವನ್ನು ಚೆಕ್ ಅಥವಾ ನಗದು ಮೂಲಕ ವಾಪಸ್ಸು ಕೊಡುತ್ತಾರೆ ಎಂದರೆ ಸರಿ.

**3.** ಫಿರ್ಯಾದಿಯು 2014 ರಿಂದ ನನ್ನೊಂದಿಗೆ ವ್ಯವಹಾರ ಮಾಡುತ್ತಿದ್ದಾನೆ. 2014 ರಿಂದ ವ್ಯವಹಾರ ಮಾಡುತ್ತಿರುವ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ.ಮಾಲನ್ನು ಪೂರೈಸಿದ ನಂತರ ಫಿರ್ಯಾದಿಯು ನನ್ನ ಚೆಕ್ಕು ಮತ್ತು ದಾಖಲೆಗಳನ್ನು ವಾಪಸ್ಸು ಕೊಡಲು ನಿರಾಕರಿಸಿದಾಗ ನಾನು ಅಗತ್ಯ ಕ್ರಮಕ್ಕಾಗಿ ಯಾವುದೇ ದೂರನ್ನು ದಾಖಲು ಮಾಡಲಿಲ್ಲ. ಫಿರ್ಯಾದಿಯು ನನ್ನ ಬಳಿ ಯಾವುದೇ ವಿಗ್ರಹಗಳನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ–5 ರ ರಶೀದಿಗಳಿಗೆ ಸಂಬಂಧಪಟ್ಟ ತೆರಿಗೆಯನ್ನು ನಾನು ಸಂಬಂಧಪಟ್ಟ ಇಲಾಖೆಗೆ ಪಾವತಿ ಮಾಡಿದ್ದೇನೆ. ತೆರಿಗೆ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ. ಫಿರ್ಯಾದಿಯಿಂದ ಪಡೆದ ಸಾಲದ ಹಣವನ್ನು ಮರು ಪಾವತಿ ಮಾಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ನಿಡಿ–5 ರ ರಶೀದಿಗಳಲ್ಲಿ ಪಕ್ಷಗಾರರ ಸಹಿ ಇಲ್ಲ ಎಂದರೆ, ಸಾಕ್ಷಿಯು ನಾನು ಯಾವುದೇಪಾರ್ಟಿಯ ಸಹಿಯನ್ನು ತೆಗೆದುಕೊಳ್ಳುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ–5 ಅನ್ನು ನಾನೇ ಬರೆದಿದ್ದೇನೆ ಎಂದರೆ ಸರಿ. ನಿಡಿ–5 ರ ಪುಸ್ತಕ ನನ್ನ ಬಳಿಯೇ ಇದ್ದ ಕಾರಣ ನನಗೆ ಅನೂಕೂಲವಾಗುವಂತೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಡಿ–5 ರ ಬಿಲ್ಲುಗಳಲ್ಲಿ ಟಿನ್ ನಂಬರ್ ಇಲ್ಲ ಎಂದರೆ, ಫಿರ್ಯಾದಿಯು ಟಿನ್ ನಂಬರನ್ನು ಕೊಡದ ಕಾರಣ ನಮೂದು ಮಾಡಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.